# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 05.02.2024ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2024ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಗಳು.

<u>ಉಪಸ್ಥಿತರು:</u>

| | | | |
|---|---|---|---|
| 1. | ಪ್ರೊ. ಜಯರಾಜ್ ಅಮೀನ್<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ. ರಾಮೇಗೌಡಎಂ.,<br>ಜಂಟಿ ನಿರ್ದೇಶಕರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಪ್ರೊ. ಎಂ. ಜಯಶಂಕರ್<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು | |
| 4. | ಡಾ. ಎಸ್. ಬಿ. ಎಂ. ಪ್ರಸನ್ನ | ಸದಸ್ಯರು | |
| 5. | ಡಾ. ಕೆ. ಸಿ. ಮಹದೇಶ | ಸದಸ್ಯರು | |
| 6. | ಶ್ರೀ ಕೃಷ್ಣ ಪ್ರಸಾದ್ ಕೆ. ಎನ್. | ಸದಸ್ಯರು | ಆನ್‌ಲೈನ್ ಮೂಲಕ ಹಾಜರಾತಿ |
| 7. | ಡಾ. ವರದರಾಜ ಸಿ.ಎಚ್ | ಸದಸ್ಯರು | |
| 8. | ಶ್ರೀ ಫಾದರ್ ಮೈಕಲ್ ಸಂತುಮಯೋರ್ | ಸದಸ್ಯರು | |
| 9. | ಶ್ರೀಮತಿ ಸಮೀರ ಕೆ. ಎ. | ಸದಸ್ಯರು | |
| 10. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು | |
| 11. | ಶ್ರೀ ಸಿ.ಎ. ನಿತಿನ್ ಜೆ ಶೆಟ್ಟಿ, ಮಂಗಳೂರು | ಸದಸ್ಯರು | |
| 12. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು | |
| 13. | ಶ್ರೀ ರಘುರಾಜ್, ಕದ್ರಿಕಂಬಳ, ಮಂಗಳೂರು | ಸದಸ್ಯರು | |
| 14. | ಶ್ರೀ ಅಚ್ಯುತ ಗಟ್ಟಿ, ಕೊಣಾಜೆ | ಸದಸ್ಯರು | |
| 15. | ಶ್ರೀ ಮಹಮ್ಮದ್ ಸವಾದ್, ಸುಳ್ಯ | ಸದಸ್ಯರು | |
| 16. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,<br>ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ | ಸದಸ್ಯರು | |

| | | |
|---|---|---|
| 17. | ಪ್ರೊ. ವೈ. ಸಂಗಪ್ಪ<br>ಕುಲಸಚಿವರು (ಪರೀಕ್ಷಾಂಗ)(ಪ್ರಭಾರ) | ಸದಸ್ಯರು |
| 18. | ಪ್ರೊ. ವೈ. ಸಂಗಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು |
| 19. | ಪ್ರೊ. ವೈ. ಸಂಗಪ್ಪ<br>ಕುಲಸಚಿವರು (ಆಡಳಿತ)(ಪ್ರಭಾರ) | ಸದಸ್ಯ ಕಾರ್ಯದರ್ಶಿ |

## ಪ್ರಾರಂಭಿಕ

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

### I. ನಡವಳಿಗಳ ದೃಢೀಕರಣ

ದಿನಾಂಕ 19.01.2024 ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಪ್ರಥಮ ವಿಶೇಷ ಸಭೆಯ ನಡವಳಿಯ ದೃಢೀಕರಣ.

- ದೃಢೀಕರಿಸಲಾಯಿತು. -

### II. ಈ ಸಿಂಡಿಕೇಟು ಸಭೆಗೆ ಮಂಡಿಸಲಿರುವ ಕಾರ್ಯಸೂಚಿಗಳು:

ಕಾರ್ಯಸೂಚಿ ಸಂಖ್ಯೆ: ವಿ.ಸ.2:1(2024)

ವಿಷಯ: ಕೋಚಿಮುಲ್ ನೇಮಕಾತಿಗೆ ಸಂಬಂಧಿಸಿದ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎನ್ನಲಾದ ಬಗ್ಗೆ, ಜಾರಿ ನಿರ್ದೇಶನಾಲಯ(ED) ವು ಕುಲಸಚಿವ(ಪರೀಕ್ಷಾಂಗ) ಕಛೇರಿಗೆ ಭೇಟಿ ನೀಡಿದ, ತನಿಖೆ ನಡೆಸಿರುವ ಬಗ್ಗೆ.

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಕೋಚಿಮುಲ್‌ದಲ್ಲಿನ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾನ್ಯ ಕುಲಪತಿಯವರು ಈ ದಿನದವರೆಗೆ ನಡೆದ ಎಲ್ಲಾ ವಿಷಯಗಳ ಬಗ್ಗೆ ಪೂರ್ಣ ಮಾಹಿತಿಗಳನ್ನು ಸವಿಸ್ತಾರವಾಗಿ ಸಭೆಗೆ ಮಂಡಿಸಿದರು. ಸದರಿ ವಿಚಾರದ ಬಗ್ಗೆ ನಡೆಸಲಾದ ಪತ್ರ ವ್ಯವಹಾರಗಳ ಪ್ರತಿಗಳನ್ನು ಸದಸ್ಯರುಗಳ ಅವಗಾಹನೆಗೆ ಒದಗಿಸಿದರು. ಪ್ರಕರಣದ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಕುಲಪತಿಯವರೇ ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕಾಗಿ ನಿರ್ಣಯಿಸಲಾಯಿತು.

ಪ್ರಸ್ತುತ, ಕೋಚಿಮುಲ್ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಭೆಯು ಈ ಕೆಳಗಿನಂತೆ ಉಪಸಮಿತಿಯನ್ನು ರಚಿಸಲು ಮತ್ತು ಸಮಿತಿಯು ದಿನಾಂಕ

12.02.2024 ರೊಳಗೆ ಸದರಿ ಪ್ರಕರಣಕ್ಕೆ ಸಂಬಂಧಿಸಿ ದಾಖಲೆಗಳನ್ನು ಪರಿಶೀಲಿಸಿ ವಿಸ್ತೃತ ವರದಿಯನ್ನು ಮತ್ತು ಶಿಫಾರಸ್ಸುಗಳನ್ನು ಸಲ್ಲಿಸುವಂತೆ ನಿರ್ಣಯಿಸಲಾಯಿತು.

1. ಪ್ರೊ. ಎಂ.ಜಯಶಂಕರ್
   ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ - ಅಧ್ಯಕ್ಷರು
   ಮಂಗಳೂರು ವಿಶ್ವವಿದ್ಯಾನಿಲಯ
2. ಕುಲಸಚಿವರು (ಪರೀಕ್ಷಾಂಗ)(ಪ್ರಭಾರ) - ಸದಸ್ಯರು
3. ಡಾ.ರಾಮೇ ಗೌಡ .ಎಂ. - ಸದಸ್ಯರು
   ಜಂಟಿ ನಿರ್ದೇಶಕರು ಮತ್ತು
   ಮಾನ್ಯ ಸಿಂಡಿಕೇಟು ಸದಸ್ಯರು
4. ಡಾ. ಎಸ್.ಬಿ.ಎಂ. ಪ್ರಸನ್ನ - ಸದಸ್ಯರು
   ಮಾನ್ಯ ಸಿಂಡಿಕೇಟು ಸದಸ್ಯರು
5. ಶ್ರೀ ಸುರೇಶ್ ಕುಮಾರ್ ಬಿ.ನಾವೂರು - ಸದಸ್ಯರು
   ಮಾನ್ಯ ಸಿಂಡಿಕೇಟು ಸದಸ್ಯರು
6. ಶ್ರೀ ಮಹಮ್ಮದ್ ಸವಾದ್ - ಸದಸ್ಯರು
   ಮಾನ್ಯ ಸಿಂಡಿಕೇಟು ಸದಸ್ಯರು
7. ಶ್ರೀ ರಘುರಾಜ್ - ಸದಸ್ಯರು
   ಮಾನ್ಯ ಸಿಂಡಿಕೇಟು ಸದಸ್ಯರು
8. ಕುಲಸಚಿವರು/ಕುಲಸಚಿವರು(ಪ್ರಭಾರ) - ಸದಸ್ಯ ಸಂಚಾಲಕರು

ಇತರ ವಿಷಯ:

1. ದಿನಾಂಕ 05.02.2024ರಂದು ನಡೆಯುತ್ತಿರುವ ಸಿಂಡಿಕೇಟಿನ ದ್ವಿತೀಯ ವಿಶೇಷ ಸಭೆಯ ನಡವಳಿಯನ್ನು ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರ ಅಭಿಪ್ರಾಯದಂತೆ ಇಂದಿನ ಸಭೆಯ ನೇರ ಪ್ರಸಾರವನ್ನು ತಟಸ್ಥಗೊಳಿಸಲು ಸಿಂಡಿಕೇಟು ನಿರ್ಣಯಿಸಿತು.

2. ದಿನಾಂಕ 01.04.2020 ರಿಂದ ಈವರೆಗೆ ಮಂಗಳೂರು ವಿಶ್ವವಿದ್ಯಾನಿಲಯದಿಂದ ನಡೆಸಲಾದ ವಿವಿಧ ಸಹಕಾರಿ ಸಂಘ / ಬ್ಯಾಂಕ್ ಹಾಗೂ ಇತರೆ ಸಂಸ್ಥೆಗಳ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಪರೀಕ್ಷಾ ಕಾರ್ಯಗಳ ಖರ್ಚುವೆಚ್ಚಗಳ ವಿವರ ಮತ್ತು ಸದರಿ ಸಂಸ್ಥೆಗಳಿಂದ ವಿಶ್ವವಿದ್ಯಾನಿಲಯಕ್ಕೆ ಸಂದಾಯವಾದ ಮೊತ್ತಗಳ ಮತ್ತು ಬ್ಯಾಂಕ್ ಖಾತೆಗಳ ವಿವರಗಳ ಸಂಪೂರ್ಣ ಮಾಹಿತಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

ಮುಂದುವರಿದು, ಡಾ.ರಾಜುಕೃಷ್ಣ ಚಲಣ್ಣವರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ವಿಭಾಗ ಇವರು ಕುಲಸಚಿವರು (ಪರೀಕ್ಷಾಂಗ) ಹುದ್ದೆಯ ಕರ್ತವ್ಯಾವಧಿಯಲ್ಲಿ ವಿವಿಧ ಸಹಕಾರಿ ಸಂಘ/ ಬ್ಯಾಂಕ್ ಹಾಗೂ ಇತರೆ ಸಂಸ್ಥೆಗಳ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಪರೀಕ್ಷಾ ಕಾರ್ಯಗಳನ್ನು ನಡೆಸಿರುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳುವುದು.

3. ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸರಕಾರದಿಂದ ಹಂಚಿಕೆಯಾದ ಜಾಗವನ್ನು ಖಾಸಗಿ ಸಂಸ್ಥೆಯವರು ಅತಿಕ್ರಮಣ ಮಾಡಿರುವ ವಿಚಾರವನ್ನು ಸಿಂಡಿಕೇಟು ಸಭೆಯು ಗಂಭೀರವಾಗಿ ಪರಿಗಣಿಸಿ ಇದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಕಾನೂನಾತ್ಮಕವಾಗಿ ವ್ಯವಹರಿಸಲು ಮತ್ತು ಕಂದಾಯ ಇಲಾಖೆ ಮೂಲಕ ಸರ್ವೇ ಕಾರ್ಯವನ್ನು ನಡೆಸಲು ಸಭೆಯು ತೀರ್ಮಾನಿಸಿತು.

4. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖಾಯಂ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕೇತರ ಉದ್ಯೋಗಿಗಳಿಗೆ ನಿಯಮಾನುಸಾರ ಮುಂಬಡ್ತಿಯನ್ನು ನೀಡಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಭೆಯು ನಿರ್ಣಯಿಸಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

**ಸಹಿ/-**
ಕುಲಸಚಿವರು

**ಸಹಿ/-**
ಕುಲಪತಿಗಳು